ಒಂದಿಷ್ಟು ಗಾಳಿ+ಹೈಡ್ರೋಜನ್+ಕಾರ್ಬನ್ = ವಿಶ್ವಕಪ್ ಫುಟ್‌ಬಾಲ್

ವಿಶ್ವಕಪ್ ಚೆಂಡಿನಲ್ಲಿ ಏನಿದೆ ವಿಶೇಷ?

ಮೂವತ್ತು ದಿನಗಳು. ಅರುವತ್ತು ಆಟಗಳು. ಅಂತೂ ವಿಶ್ವಕಪ್ ಫುಟ್‌ಬಾಲ್ ಮುಗಿದಾಗ ಮನಸ್ಸಿನಲ್ಲಿ ಉಳಿದ ಹೆಸರುಗಳು ಮೂರೇ.. ಚಿನ್ನದ ಫುಟ್‌ಬಾಲ್ ಪಡೆದ ಲಿಯೊನೆಲ್ ಮೆಸ್ಸಿ, ಎಲ್ಲರನ್ನೂ ಕಚ್ಚಿದ ಸ್ವರೇಜ್, ಕೊನೆಯ ಘಳಿಗೆಯಲ್ಲಿ ಮಿಂಚಿನ ಗೋಲು ಹೊಡೆದ ಗೋಟ್ಜೆ. ಇವೆಲ್ಲದರ ಮಧ್ಯೆ ಎಲ್ಲರ ಹೊಡೆತವನ್ನೂ ತಿಂದು, ಮಣ್ಣಲ್ಲಿ ಉರುಳಾಡಿದ ಚೆಂಡಿನ ನೆನಪು ಯಾರಿಗೂ ಆಗಲೇ ಇಲ್ಲ. ಇದೋ ಕಣದ ಮಧ್ಯೆಯೇ ಇದ್ದರೂ, ಎಲ್ಲರ ಮನಸ್ಸಿನಿಂದ ಮರೆಯಾಗಿ ಬಿಟ್ಟ ಆ ಚೆಂಡಿನ ನೆನಪಿನಲ್ಲಿ ಈ ಲೇಖನ.

ಅದು ಅನಾಮಿಕವಂತೂ ಅಲ್ಲ. ಬ್ರಾಕುಜಾ ಎಂದು ಹೆಸರು ಪಡೆದ ವಿಶ್ವಕಪ್‌ನ ಚೆಂಡು ಅಸಾಧಾರಣವಂತೂ ಹೌದು. ಪುಟಿಯುತ್ತಾ ಮೈದಾನವನ್ನೆಲ್ಲ ತನ್ನದಾಗಿಸಿಕೊಂಡಿದ್ದ ಚೆಂಡು ವಿಶಿಷ್ಟ ಕೆಮಿಸ್ಟ್ರಿಯ ಫಲ. ವಿಶ್ವ ಕಪ್‌ಗಾಗಿಯೇ ವಿಶೇಷವಾಗಿ ತಯಾರಾದ ವಸ್ತು.

ಚೆಂಡಿನಲ್ಲಿ ಏನಿದೆ ಎಂದು ನೀವು ಕೇಳಬಹುದು. ಚೆಂಡಿನಲ್ಲಿ ಇರುವುದೆಲ್ಲವೂ ಕೇವಲ ಹೈಡ್ರೋಜನ್ ಮತ್ತು ಆಕ್ಸಿಜನ್. ನೀರಿನಲ್ಲಿ ಇರುವಂತಹ ಧಾತುಗಳೇ. ಆದರೆ ಅವುಗಳು ಚೆಂಡಿನಲ್ಲಿ ಪಡೆದಿರುವ ಮಾರ್ಪಾಟು ವಿಶೇಷ ಕೆಮಿಸ್ಟ್ರಿಯ ಮಾಂತ್ರಿಕತೆ ಎನ್ನಲಡ್ಡಿಯಿಲ್ಲ. ವಿಭಿನ್ನ ಸಂಖ್ಯೆಯಲ್ಲಿ, ವಿಭಿನ್ನ ರೀತಿಯಲ್ಲಿ ಕಾರ್ಬನ್ ಹಾಗೂ ಹೈಡ್ರೋಜನ್ ಅಣುಗಳು ತಳುಕಿಕೊಂಡು ಸೃಷ್ಟಿಯಾದ ಪಾಲಿಮರ್ ವಸ್ತುಗಳಿಂದ ಚೆಂಡನ್ನು ರೂಪಿಸಲಾಗಿದೆ. ಸಾವಿರದಲ್ಲಿ ಒಂದೋ ಎರಡೋ ನೈಟ್ರೋಜನ್ ಅಣುಗಳು, ಹತ್ತೋ ಇಪ್ಪತ್ತೋ ಆಕ್ಸಿಜನ್ ಅಣುಗಳು ಇರಬಹುದು. ಅದು ಬಿಟ್ಟರೆ ಇಡೀ ಚೆಂಡಿನಲ್ಲಿರುವ ಎಲ್ಲ ಪಾಲಿಮರ್‌ಗಳಲ್ಲೂ ಕಾರ್ಬನ್ ಮತ್ತು ಹೈಡ್ರೋಜನ್‌ಗಳದ್ದೇ ರಾಜ್ಯಭಾರ.

ಸಾಮಾನ್ಯ ಫುಟ್‌ಬಾಲ್ ಚೆಂಡಿನಲ್ಲಿ ಗಾಳಿಯೂದಿಕೊಂಡ ಚೀಲವನ್ನು ಬ್ಲಾಡರ್ ಎನ್ನುತ್ತಾರೆ. ಬ್ಲಾಡರ್ ಪದಕ್ಕೆ ಇಂಗ್ಲಿಷಿನಲ್ಲಿ ಮೂತ್ರದ ಚೀಲ ಎನ್ನುವ ಅರ್ಥವೂ ಇದೆ.

ಬಹಳ ಹಿಂದೆ ಫುಟ್‌ಬಾಲ್ ಇನ್ನೂ ಮಕ್ಕಳ ಆಟವಾಗಿದ್ದಾಗ, ಹಂದಿಯ ಮೂತ್ರದ ಚೀಲದಲ್ಲಿ ನೀರು ಅಥವಾ ಗಾಳಿ ತುಂಬಿ ಆಡುತ್ತಿದ್ದರಂತೆ. ಅದೇ ಮಾತು ಇಂದಿಗೂ ಉಳಿದುಕೊಂಡಿದೆ. ಆದರೆ ವಿಶ್ವಕಪ್‌ನಲ್ಲಿ ಇರುವ ಬ್ಲಾಡರ್‌ಗೂ ಹಂದಿಗೂ ಸಂಬಂಧವೇ ಇಲ್ಲ. ಬ್ಯುಟೈಲ್ ರಬ್ಬರ್ ಎನ್ನುವ ವಿಶೇಷ ರಬ್ಬರ್‌ನಿಂದ ವಿಶ್ವಕಪ್ ಫುಟ್‌ಬಾಲ್‌ನ ಬ್ಲಾಡರ್ ತಯಾರಾಗಿದೆ. ಇದನ್ನು ಸಾಮಾನ್ಯವಾಗಿ ಲೇಟೆಕ್ಸ್ ರಬ್ಬರ್‌ನಿಂದ ತಯಾರಿಸುವರು. ಆದರೆ ಬ್ಯುಟೈಲ್ ರಬ್ಬರ್ ಲೇಟೆಕ್ಸ್‌ಗಿಂತ ತುಸು ಗಡಸು. ಬಾಯಲ್ಲಿ ಅಗಿಯುವ ಚ್ಯೂಯಿಂಗ್ ಗಮ್‌ನಲ್ಲಿ ಇರುವುದೂ ಆಹಾರ ಗುಣಮಟ್ಟದ ಬ್ಯೂಟೈಲ್ ರಬ್ಬರ್. ಆಟದ ಮೈದಾನಕ್ಕೆ ಆಟಗಾರರನ್ನು ಕರೆತರುವ ಬಸ್ಸಿನ ಗಾಲಿಗಳ ಟ್ಯೂಬ್‌ಗಳಲ್ಲೂ ಇದೇ ರಬ್ಬರ್ ಇರುತ್ತದೆ. ತುಸು ಅಂಟಂಟು ಅನ್ನಿಸಿದರೂ, ಚೆನ್ನಾಗಿ ಹಿಗ್ಗಬಲ್ಲದು. ಹೀಗಾಗಿ ವಿಶ್ವಕಪ್ ಚೆಂಡಿನಲ್ಲಿ ಇದುವೂ ಒಂದು ಅಂಗ.


ಚೆಂಡಿನ ಇನ್ನೊಂದು ಪ್ರಮುಖ ಭಾಗ ಎಂದರೆ ಬ್ಲಾಡರ್ ಅನ್ನು ಮುಚ್ಚಿಕೊಂಡಿರುವ ಹೊದಿಕೆ. ಈ ಹೊದಿಕೆ ಎಳೆದರೆ ಹಿಗ್ಗುವ ಬ್ಯುಟೈಲ್ ರಬ್ಬರ್‌ನ ಬ್ಲಾಡರನ್ನು ಕಾಯುತ್ತದೆ. ಇದರಲ್ಲಿ ಬಟ್ಟೆಯಂತಹ ಅಮೈಡ್ ಎನ್ನುವ ಅಣುಗಳು ಸಹಸ್ರಾರು ಸಂಖ್ಯೆಯಲ್ಲಿ ಜೋಡಣೆಯಾಗಿ ತಯಾರಾದ ವಸ್ತು. ಅಮೈಡ್‌ಗಳಲ್ಲಿ ಕಾರ್ಬನ್, ಹೈಡ್ರೋಜನ್ ಜೊತೆಗೆ ನೈಟ್ರೋಜನ್ ಕೂಡ ಇರುತ್ತದೆ. ಪಾಲಿಯೆಸ್ಟರ್‌ನಲ್ಲಿ ನೈಟ್ರೋಜನ್ ಇಲ್ಲ. ನೈಲಾನ್ ಗಟ್ಟಿಯಷ್ಟೆ ಅಲ್ಲ, ನೀರನ್ನು ಹೀರಿ ತೇವವಾಗುವುದೂ ಇಲ್ಲ. ಒಂದು ವೇಳೆ ತೇವವಾದರೂ ಕ್ಷಿಪ್ರವಾಗಿ ಒಣಗಿ ಬಿಡುತ್ತದೆ.

ವಿಶ್ವಕಪ್ ಚೆಂಡಿನ ಸೌಂದರ್ಯಕ್ಕೆ ಕಾರಣ ಅದರ ಹೊರಗಿನ ಕವಚ. ಚೆಂಡುಗಳಲ್ಲಿ ಚರ್ಮದ ತುಣುಕುಗಳನ್ನು ಹೊಲಿದು ಈ ಕವಚ ತಯಾರಿಸುವುದು ಸಾಮಾನ್ಯ. ನಾವು ಆಡುವ ಫುಟ್‌ಬಾಲಿನ ಹೊದಕೆಯಲ್ಲಿ ಷಟ್ಕೋಣ ಹಾಗೂ ಪಂಚಭುಜಗಳ ತುಣುಕುಗಳನ್ನು ಹೊಲಿದಿರುತ್ತಾರೆ.

ಅಗ್ಗದ ಫುಟ್‌ಬಾಲ್‌ಗಳಲ್ಲಿ ಬಕೆಟ್, ನೀರಾವರಿಗಾಗಿ ಬಳಸುವ ಕೊಳವೆಗಳನ್ನು ತಯಾರಿಸುವ ಪಾಲಿವಿನೈಲ್‌ಕ್ಲೋರೈಡ್ ಬಳಕೆಯಾಗಿರುತ್ತದೆ.

ಆದರೆ ಬ್ರಾಕುಜಾದ ಕವಚವನ್ನು ಪಾಲಿಯುರಿಥೇನ್ ಬಳಸಿ ತಯಾರಿಸಿದ್ದಾರೆ.

ಪಾಲಿಯುರಿಥೇನ್ ಒಂದು ಬಗೆಯ ನೊರೆ. ಊಟದ ಬಾಕ್ಸ್‌ಗಳ ಹೊರ ಕವಚದಲ್ಲಿ, ಚಪ್ಪಲಿ, ಶೂಗಳ ತಳಗಳನ್ನು ಮಾಡಲು ಇವನ್ನು ಬಳಸುತ್ತಾರೆ. ಕೇವಲ ಆರೇ, ಆರು ತುಣುಕುಗಳನ್ನು ಜೋಡಿಸಿ ತಯಾರಿಸಲಾಗಿದೆ. ಇಲ್ಲಿ ದಾರದ ಹೊಲಿಗೆಗಳ ಬದಲಿಗೆ ನೊರೆಯ ತುಣುಕುಗಳನ್ನು ಶಾಖದಿಂದ ಬೆಸುಗೆ ಹಾಕಲಾಗಿದೆ. ಪಾಲಿಯುರಿಥೇನ್ ಹಗುರವಾದರೂ ದೃಢವಾದ ವಸ್ತು.



© ಕಾಂಪೌಂಡ್ ಇಂಟರೆಸ್ಟ್ 2014– www.compoundchem.com

ಹೀಗಾಗಿ ಅದರಲ್ಲಿ ತುಂಬಿದ ಗಾಳಿ ಹೆಚ್ಚು ಕಾಲ ಉಳಿಯುತ್ತದೆ. ಆಟದ ಅರ್ಧದಲ್ಲಿಯೇ ಬಾಲು ಪುಸ್ ಎಂದರೆ ಚೆನ್ನಾಗಿದ್ದೀತೇ? ಅದೂ ಕೋಟ್ಯಾನುಕೋಟಿ ಜನ ವೀಕ್ಷಿಸುವ ವಿಶ್ವಕಪ್‌ನಲ್ಲಿ?

ಬ್ಲಾಡರ್‌ನ ಮೂತಿಯನ್ನು ಮುಚ್ಚುವ ವಾಲ್ವ್ ಕೂಡ ಬ್ಯುಟೈಲ್ ರಬ್ಬರ್‌ನಿಂದಲೇ ತಯಾರಾಗಿದೆ. ಆಟದಲ್ಲಿ ಚೆಂಡು ತನ್ನ ಬಳಿಗೆ ಬರುವದನ್ನೇ ಕಾತರದಿಂದ ಕಾಯುತ್ತಾ ಇರುವ ಗೋಲಿ ತೆಳುವಾದ ವಸ್ತುವಿನ ಐದಾರು ಪದರಗಳಿರುತ್ತವೆ. ಇದಿಲ್ಲದಿದ್ದರೆ ಬ್ಲಾಡರ್ ಬಲು ಬೇಗನೆ ಹರಿಯುವ ಸಾಧ್ಯತೆಗಳಿವೆ. ಚೆಂಡು ಪುಟವೇಳಲು ಹಾಗೂ ಗಟ್ಟಿಯಾಗಿರುವುದಕ್ಕೆ ಈ ಪದರ ನೆರವಾಗುತ್ತದೆ. ಸಾಮಾನ್ಯವಾಗಿ ಇದಕ್ಕಾಗಿ ಪಾಲಿಯೆಸ್ಟರ್ ಅಥವಾ ನೈಲಾನ್ ಬಳಸುವರು.

ಬ್ರಾಕುಜಾದಲ್ಲಿ ನೈಲಾನ್ ಅನ್ನು ಬಳಸಲಾಗಿದೆ. ನೈಲಾನ್‌ಒಂದು ಪಾಲಿಅಮೈಡ್. ಅರ್ಥಾತ್ ನೀರನ್ನೂ ಹೀರುವುದಿಲ್ಲ. ಬ್ರಾಕುಜಾ ಚೆಂಡನ್ನು ನೀರಲ್ಲಿ ಮುಳುಗಿಸಿದಾಗ ತನ್ನ ತೂಕದ ಶೇಕಡ 0.2ರಷ್ಟು ಮಾತ್ರ ನೀರನ್ನು ಹೀರಿಕೊಂಡಿತಂತೆ. ಆಟಗಾರರ ಶೂನಲ್ಲಿರುವ ಮೊಳೆಗಳು ಚೆಂಡನ್ನು ಪುಸ್ ಎನ್ನಿಸದೇ ಇರುವುದಕ್ಕೆ ಈ ಪಾಲಿಯುರಿಥೇನ್ ಕವಚವೇ ಕಾರಣ.

— ಕೆ.ಎಸ್.

ಮಾಟದ ಆಟಿಕೆ

ಮೂಲೆ ಮನೆ ಕಟ್ಟುವ ಬಗೆ

ರೂಬಿಕ್ ಕ್ಯೂಬ್‌ನಲ್ಲಿರುವ ಪ್ರತಿಯೊಂದು ತುಣುಕಿಗೂ ಅದರದ್ದೇ ಸ್ಥಾನ ಇರುತ್ತದೆ ಎಂದು ಹಿಂದಿನ ಕಂತಿನಲ್ಲಿ ತಿಳಿದಿರಿ. ಹಾಗೆಯೇ ಒಂದು ಬದಿಯಲ್ಲಿನ ಮಧ್ಯದ ಅಡ್ಡ ಹಾಗೂ ಕಂಭ ಸಾಲನ್ನು ಜೋಡಿಸಿ ಕ್ರಾಸ್ ಮಾಡುವುದು ಹೇಗೆ ಎಂದು ತಿಳಿದುಕೊಂಡಿರಿ. ಈಗ ಒಂದು ಬದಿಯ ಎಲ್ಲ ಮೂಲೆ ತುಣುಕುಗಳನ್ನೂ ಅವುಗಳ ಸ್ವಸ್ಥಾನಕ್ಕೆ ತರುವುದು ಹೇಗೆ ಎಂದು ನೋಡೋಣ.



ಚಿತ್ರ 1 ನೋಡಿ. ಇದು ಗೋಜಲಾದ ಕ್ಯೂಬ್. ಇದರಲ್ಲಿ ಮೂಲೆಯ ತುಣುಕುಗಳನ್ನು ನೋಡಿ. ಅವು ಮೂಲೆಯಲ್ಲೇ ಇದ್ದರೂ ಸ್ವಸ್ಥಾನದಲ್ಲಿ ಇಲ್ಲ ಎನ್ನುವುದು ಸ್ಪಷ್ಟ. ಏಕೆಂದರೆ ಪ್ರತಿ ಮೂಲೆಯ ತುಣುಕಿಗೂ ಮೂರು ಬದಿಗಳಿರುತ್ತವೆ. ತುಣುಕಿನ ಆಯಾ ಬಣ್ಣದ ಬದಿ, ಆಯಾ ಬಣ್ಣದ ಬದಿ (ಅದೇ ಬಣ್ಣದ ತುಣುಕು ನಡುವಿನಲ್ಲಿರುವ ಬದಿ)ಯಲ್ಲೆ ಇರಬೇಕು. ಇಲ್ಲಿ ಮೇಲ್ಗಡೆ ಎಡ ಮೂಲೆಯಲ್ಲಿರುವ ತುಣುಕಿನ ಕೆಂಪು ಬದಿ ಹಸಿರು ಬದಿಯತ್ತ ಮುಖ ಮಾಡಿದೆ. ಹಸಿರು ಬದಿ ಬಿಳಿಯ ಬದಿಯಲ್ಲಿ ಇದೆ. ಈ



ಮುಖಗಳು ಆಯಾ ಬಣ್ಣದ ಬದಿಯಲ್ಲಿ ಇರುವಂತೆ ಮಾಡಿದರೆ ಮೂಲೆಯ ತುಣುಕನ್ನು ಸ್ವಸ್ಥಾನಕ್ಕೆ ಸೇರಿಸಿದ ಹಾಗೆ ಆಗುತ್ತದೆ.


ಇದಕ್ಕೆ ಒಂದು ಸೂತ್ರವಿದೆ. ಸೂತ್ರವಿಲ್ಲದೆಯೂ ಅಭ್ಯಾಸದಿಂದ ನೀವು ತುಣುಕುಗಳನ್ನು ಅವುಗಳ ಸ್ಥಾನಕ್ಕೆ ಸೇರಿಸಬಹುದು. ಯಾವ ತುಣುಕನ್ನು ನೀವು ಸ್ವಸ್ಥಾನಕ್ಕೆ ಸೇರಿಸಬೇಕೆಂದಿದ್ದೀರೋ, ಅದನ್ನು ಮೊದಲಿಗೆ ಬಲ ಬದಿಯ ತಳ ಮೂಲೆಗೆ ತಂದು ಕೂಡಿಸಿ. ಅಥವಾ ಬದಿಗಳನ್ನೇ ತಿರುಗಿಸಿಕೊಂಡು, ಅದು ನಿಮ್ಮ ಬಲ ಬದಿಯ ತಳ ಮೂಲೆಯಲ್ಲಿ ಇರುವಂತೆ ಮಾಡಬೇಕು. ಅನಂತರದ ಕೆಲಸ ಸುಲಭ. RUR'U' s ಸೂತ್ರವನ್ನು ಬಳಸಿ.

ಈ ಸೂತ್ರವನ್ನು ನೀವು ಹಲವು ಬಾರಿ ಮರುಕಳಿಸಬೇಕಾಗಬಹುದು. ಆದರೆ ಕೊನೆಗೆ ಆ ತುಣುಕು ಅದರ ಸ್ಥಾನವನ್ನು ತಲುಪಿಯೇ ತಲುಪುತ್ತದೆ. ಅನಂತರ ಮತ್ತೊಂದು ಮೂಲೆಯನ್ನು ತೆಗೆದುಕೊಳ್ಳಿ. ಹೀಗೆ ನಾಲಕ್ಕೂ ಮೂಲೆಗಳನ್ನು ಅವುಗಳ ಸ್ಥಾನಕ್ಕೆ ಕೂಡಿಸಿದ ಮೇಲೆ ನಿಮ್ಮ ಕ್ಯೂಬ್ ಹೀಗೆ ಕಾಣುವುದು.

ಈ ಎಲ್ಲ ಚಲನೆಗಳನ್ನೂ ನಡೆಸುವಾಗ ಯಾವ್ಯಾವ ತುಣುಕು ಹೇಗೆ ಸ್ಥಾನ ಬದಲಿಸುತ್ತದೆ ಎನ್ನುವುದನ್ನು ಗಮನಿಸಿದರೆ ಮುಂದಿನ ನಡೆಗಳು ಸುಲಭ.

ಮುಂದಿನ ವಾರ: ನಡುವಿನ ಸಾಲನ್ನು ಕೂಡಿಸುವ ಬಗೆ


– ರೇವಂತ್




ಇದೋ ಇಂದು ಭೂಮಿ!

ನಮ್ಮ ಮನೆಯಲ್ಲಿ ಈಗ ಏನು ನಡೆಯುತ್ತಿದೆ ಎನ್ನುವುದು ಎದುರಿಗೇ ಕಾಣುತ್ತದೆ. ಅದೇ ಸೌರಮಂಡಲದಲ್ಲಿ ನಮ್ಮ ನೆಲೆಯಾಗಿರುವ ಭೂಮಿಯ ಸ್ಥಿತಿ ಈಗ ಹೇಗಿದೆ ಎನ್ನುವುದು ಎಷ್ಟೇ ತಿಣುಕಿದರೂ ತಿಳಿಯುವುದು ಕಷ್ಟ. ಏಕೆಂದರೆ ಇಡೀ ಭೂಮಿ ಕಾಣುವ ನೆಲೆ ಇರಬೇಕಲ್ಲ! ಹಾಗಂತ ನಿರಾಶರಾಗಬೇಕಿಲ್ಲ. ಅಮೆರಿಕೆಯ ಬಾಹ್ಯಾಂತರಿಕ್ಷ ಸಂಶೋಧನಾ ಸಂಸ್ಥೆ ನಾಸಾ ಈ ಅವಕಾಶವನ್ನು ಅರ್ಥ್ ನೌ (Earth Now) ಮೂಲಕ ನಿಮ್ಮ ಕೈಗೆಟುಕಿಸುತ್ತಿದೆ. ಈ ಆಪ್ ಭೂಮಿಯ ಈಗಿನ ಉಷ್ಣತೆ, ಸಮುದ್ರಗಳ ಉಷ್ಣತೆ, ತೇವಾಂಶ ಮುಂತಾದ ಅವಶ್ಯಕ ಲಕ್ಷಣಗಳನ್ನು ತೋರಿಸುತ್ತದೆ. ಪ್ರತಿದಿನವೂ ಆಗುವ ಬದಲಾವಣೆಗಳನ್ನು ನೀವು ಗಮನಿಸಬಹುದು. ಭೂಮಿಯ ಬಗ್ಗೆ ತಿಳಿದುಕೊಳ್ಳಲು ಅತ್ಯುಪಕಾರಿ. ಭೂಮಿಯ ಚಿತ್ರವನ್ನು ತಿರುಗಿಸಿ ವಿವಿಧ ಮಗ್ಗುಲುಗಳ ಪರಿಚಯ ಮಾಡಿಕೊಳ್ಳಬಹುದು. ಹಿರಿದಾಗಿಸಬಹುದು. ಕುಗ್ಗಿಸಬಹುದು.

— ಜನಮನ ಮಾಹಿತಿ ನಿಧಿ




ಚಿತ್ರ–ವಿಶೇಷ



ಏನಿದು? ಹೆಜ್ಜೆ ಗುರುತು ಸರಿ. ಆದರೆ ಇದರಲ್ಲೇನು ವಿಶೇಷ ತಿಳಿಯಿತೇ? ತಿಳಿದಿದ್ದರೆ ಬರೆದು ಕಳುಹಿಸಿ.

ಕಳೆದ ವಾರ (ಜುಲೈ 14) ಕಣಕದಲ್ಲಿ ಪ್ರಕಟವಾಗಿದ್ದ ಚಿತ್ರ–ವಿಶೇಷದ ಉತ್ತರ

ಇದು ಶನಿ ಗ್ರಹದ್ದೇ ಚಿತ್ರ. ಸೌರಮಂಡಲದಲ್ಲಿರುವ ಗ್ರಹಗಳಲ್ಲಿ ಅತಿ ಸುಂದರವಾದದ್ದು ನಮ್ಮ ಭೂಮಿ. ಹಸಿರು ಸೀರೆಯುಟ್ಟ ಚೆಲುವೆ ಎನ್ನಬಹುದು. ಅದರ ನಂತರದ್ದು ಶನಿ ಗ್ರಹ. ಇದರ ಪ್ರಧಾನ ಲಕ್ಷಣ ಎಂದರೆ ಸುತ್ತಲೂ ಇರುವ ಉಂಗುರಗಳು. ಸೂಕ್ಷ್ಮ ದೂಳಿನ ಕಣಗಳಿಂದ ತುಂಬಿದ್ದರೂ, ಇವು ಶನಿಗ್ರಹವನ್ನು ವಿಶಿಷ್ಟವನ್ನಾಗಿಸಿವೆ. ಶನಿಗ್ರಹದ ಈ ವೈಶಿಷ್ಟ್ಯಕ್ಕೆ ಇನ್ನೊಂದು ಲಕ್ಷಣವೂ ಈಗ ಕೂಡಿಕೊಂಡಿದೆ. ಅದುವೇ ಅದರ ಉತ್ತರ ಧ್ರುವದಲ್ಲಿರುವ ಕಿರೀಟ. ಈ ಚಿತ್ರದಲ್ಲಿ ಅದು ಸ್ಪಷ್ಟ. ಶನಿಗ್ರಹದ ಈ ಕಿರೀಟವನ್ನು ಗುರುತಿಸಿದ್ದು ಕ್ಯಾಸಿನಿ ಎನ್ನುವ ಶೋಧ ನೌಕೆ. ಇದು ಈ ಗ್ರಹದ ಅತ್ಯಂತ ಸ್ಪಷ್ಟ ಚಿತ್ರ ಎನ್ನುತ್ತದೆ ನಾಸಾ. ಇಷ್ಟು ನಿಚ್ಚಳವಾದ ಚಿತ್ರವನ್ನು ತೆಗೆಯಲು ಕ್ಯಾಸಿನಿ ಗ್ರಹಕ್ಕೆ ಎಷ್ಟು ಸಮೀಪವಿತ್ತೋ ಎಂದಿರಾ? ಕಡಿಮೆ ಏನಿಲ್ಲ. ಸುಮಾರು ಎರಡು ಲಕ್ಷ ಕಿಲೋಮೀಟರು ದೂರವಷ್ಟೆ.



ನಿಮ್ಮಲ್ಲಿಯೂ ಇಂತಹ ಚಿತ್ರ–ವಿಶೇಷಗಳಿದ್ದರೆ ನಮಗೆ ಕಳಿಸಿ. ವಿಳಾಸ: ಕಣಕ, ಕನ್ನಡ ಜನಮನ, 834, ಕಂಠೀ ಸಂಕೀರ್ಣ (2ನೇ ಮಹಡಿ), ನ್ಯೂ ಕಾಂತರಾಜ ಅರಸು ರಸ್ತೆ, ಕುವೆಂಪು ನಗರ, ಮೈಸೂರು – 570 023; ಈ–ಮೇಲ್: super.janamana@gmail.com.

ಸೀಮೆ ಹಂದೀಲಿ ನಾಟಿ ಜೀನು

ಹೈಕ್ಳ ಪಾಠ



ನಮ್ಮೂರಾಗೆ ಬೀದಿ ಸುತ್ಕೊಂಡು, ಕುಯ್ಯೋ ಮರ್ರೋ ಅಂತ ಕಿರುಚಾಡ್ಕಂಡು ಓಡಾಡಾ ಹಂದಿಗಳು ಸಾಮಾನ್ಯ ಅಲ್ಲಪ್ಪೋ! ಇವು ಬೇಜಾನು ಸೀಮೆ ಸುತ್ತಿ ಬುಟ್ಟವೆ ಅಂತ ನೆದರ್‌ಲ್ಯಾಂಡ್‌ನ ಇಗ್ನಾನಿಗಳು ಮೊನ್ನೆ ಯೇಳಿದ್ದು ಸುದ್ದಿಯಾಗ್ಬುಟ್ಟದೆ.

ಅದ್ಯಾವ ಸೀಮೆ ಸುದ್ದಿ ಕಣ್ಲಾ ಅನ್ನಬ್ಯಾಡಿ ಕಣಪ್ಪೋ. ಇದೇಸದಾಗೆ ಬೆಳ್ಯೋ ಸೀಮೆ ಅಂದೀಲಿ ನಮ್ಮೂರ ಅಂದಿ ವಂಶಾನು ಸೇರ್ಕಂಡದೆ ಅಂತ ಮಿರ್ತೆ ಬಾಸಿ ಅನ್ನಾವ ಯೇಳವ್ನೆ. ವಿಸೇಸ ಇರಾದು ಇದ್ರಲ್ಲೇ ಕಣ್ರಪ್ಪೋ. ನಮ್ಮೂರ ದನ ಆಲು ಕಡ್ಮೆ ಕೊಡ್ತದೆ ಅಂತ ನಾವು ಸೀಮೆ ಅಸಾ ತಂದು ಬೆರಕೆ ತಳಿ ಮಾಡ್ದಂಗೆ ಯುರೋಪ್‌ನಾಗೂ ಜನ ಅಂದಿಗಳ್ನ ಬೆರ್ಕೆ ಮಾಡವ್ರಂತೆ.

ಅದ್ರಾಗೇನು ಇಸೇಸ ಅನ್ನಬ್ಯಾಡಿ. ಆಂ. ಪಡುವಲ ಸೀಮೆ ಮಂದಿ ಹಂದಿ ತಿನ್ತಾರೆ ಅನ್ನೋದು ದಿಟ. ಆದರೆ ಹಂದಿ ಮೂಡಲ ಸೀಮೆ ಪ್ರಾಣಿ. ಈ ಅಂದಿ ಅನ್ನೋ ಪ್ರಾಣಿ ಈ ಬೂಮಿ ಮ್ಯಾಗೆ ಬಂದು 40 ಲಕ್ಸ ವರ್ಸ ಆಗೈತೆ ಅಂತಾರೆ. ಮೊದ್ಲು ನಂ ದೇಸ, ಚೀನಾ, ಇಂಡೊನೇಸಿಯಾದಾಗಿ ಇದು ಕಾಟ ಆಗಿ ಉಟ್ತಂತೆ. ಆಮ್ಯಾಕೆ ಇಡೀ ಬೂಮಿ ಮ್ಯಾಗೆ ಅರಡದೆ ಅಂತ ಯೋಳ್ತಾರೆ. ಇದ್ರ ಬಾಡುಂಡ ಜನ ಆಮ್ಯಾಕೆ ಇದನ್ನ ಸಾಕ್ಕಂಡವ್ರೆ.

ಆದ್ರೆ ಯುರೋಪಿನ ಸೀಮೆ ಮಂದಿ ಹಂದೀನ ಬ್ಯಾರೆಯಾಗೇ ಸಾಕ್ಕಂಡ್ರಂತೆ. ನಮ್ಕಡೆ ಜನ ಬ್ಯಾರೆಯಾಗೇ ಸಾಕ್ಕಂಡ್ರಂತೆ. ಒಂದಿನ್ನೂರು ವರ್ಸದಿಂದ ಈ ಎರಡೂ ತಳಿಗೋಳ್ನೂ ಯುರೋಪ್ನ ಜನ ಕೂಡ್ಕೆ ಮಾಡವ್ರೆ ಅಂತಾರೆ ಬಾಸಿ

ಸೀಮೆ ಅಂದಿ ಚಬಿ ತುಂಬ್ಕಂಡು, ಬೆಳ್ಗೆ ಇರತದೆ. ಮೊದ್ಲು ಇಂಗಿರಲಿಲ್ಲವಂತೆ. ಅದ್ಕೆ ಸೀಮೆ ಮಂದಿ ಚೀನಾದಿಂದ ಹಂದಿ ಕೊಂಡ್ಕಂಡು ಓಗಿ ಅಲ್ಲಿ ಹಂದಿ ಜತೆ ಬೆರ್ಕೆ ಮಾಡವ್ರೆ. ಯಾಕಂದ್ರೆ ನಮ್ಮೂರ ಅಂದಿಗಳು ಕಮ್ಮಿ ಮೇದ್ರೂ ಚೆನ್ನಾಗಿ ಚರ್ಬಿ ತುಂಬ್ಕಂತವಂತೆ. ಅಂಗೇ, ಮರಿ ಆಕುದ್ರೆ ಊರು ತುಂಬೋಷ್ಟು ಒಂದೇ ಸರಿಗೆ ಹೆರ್ತವೆ. ಕಾಯ್ಲೆ, ಕಸಾಲೆಗೆ ಸುಲ್ಬವಾಗಿ ಜಗ್ಗೋ ಅಂತವಲ್ಲ. ಅದ್ಕೆ ಈ ಅಂದಿಗೋಳ್ನ ತೊಗೊಂಡು ತಮ್ಕಡೆ ಪ್ರಾಣಿಗಳ ಜೊತೆ ಸೇರುಸ್ಕಂಡ್ರಂತೆ.

ಈ ಬಾಸಿಗೆ ಇವೆಲ್ಲ ಯೆಂಗಪ್ಪ ಗೊತ್ತಾಯ್ತು ಅಂದ್ರ? ಎಲ್ಲಾ ಅಂದಿಗಳ ವಂಸ ಜಾಲಾಡವ್ನೆ ಆಯಪ್ಪ. ಅಂದ್ರೆ ಅವ್ವೋಳಲ್ಲಿರೋ ತಳಿಗುಣದಲ್ಲಿ ಕೆಲವು ನಮ್ಮೂರ ನಾಟಿ ಅಂದಿಗಳಲ್ಲಿ ಇರೋ ಅಂಗೇ ಇವೆಯಂತೆ. ಇವೆಲ್ಲ ಅಂದಿ ಚರ್ಬಿ ಆಗಕ್ಕೆ, ಮರಿ ಆಕಕ್ಕೆ, ಕಾರಣ. ಅದ್ಕೇ ಸೀಮೆ ಮಂದಿ ನಮ್ಕಡೆ ಹಂದೀನ ಬಳಸ್ಕಂಡು ಅವರ ಹಂದೀನ ಸುದಾರಸ್ಕಂಡವ್ರೆ ಅಂತ ಬಾಸಿ ಇಚಾರ.

— ಹಳ್ಳಿ ಮೇಷ್ಟ್ರು



ದಿನ ಭವಿತವ್ಯ

ಶ್ರೀ ಜಯ ನಾಮ ಸಂವತ್ಸರೇ ದಕ್ಷಿಣಾಯಾನೇ ಗ್ರೀಷ್ಮ ಋತು ಆಷಾಢಮಾಸೇ ಕೃಷ್ಣ ಪಕ್ಷೆ, ದಶಮಿ, ಭರಣಿ, ಕೃತ್ತಿಕೆ, ಶೂಲಯೋಗ ವಣಿಕರಣ, ಕಟಕಮಾಸತೇದಿ 6, ಪುಷ್ಯಮಳೆ, 1ನೇಪಾದ, ಸೂರ್ಯೋದಯ 6–7 ಅಸ್ತ 6–52, ರಾಹುಕಾಲ 7–42ರಿಂದ 9–18, ಗುಳಿಕಕಾಲ 2–05ರಿಂದ 3–41 ಅರ್ಧಪ್ರಹಾಕಾಲ 9–18 10–54, ಯಮಕಂಟಕ ಕಾಲ 10–54 ರಿಂದ 12–30.

ಮೇಷ: ನಿಮಗೆ ಸಹಜ ಅಸಹಜ ಎನ್ನುವ ತಾರತಮ್ಯವೇ ತಿಳಿಯದೆ ಬೇಗ ಎಲ್ಲವನ್ನು ನಂಬಿ ಮೋಸ ಹೋಗಲಿದ್ದೀರಿ.

ವೃಷಭ: ಒಳ್ಳೆಯತನವನ್ನು ಇಷ್ಟಪಡುತ್ತಾರೆ. ಎಲ್ಲರೊಡನಾಟ ಸರಸ ಶೃಂಗಾರಗಳಿಂದಾಗಿ ಕೂಡಿ ಕಲಾರಸಿಕತೆಯಿಂದ ಕೂಡಿ ನಲ್ಲೆಯರ ಪ್ರೀತಿಗೆ ಪಾತ್ರರಾಗುತ್ತೀರಿ.

ಮಿಥುನ: ಆಧುನಿಕ ಜಗತ್ತಿನ ಕಾಲಾವೈಭವಗಳನ್ನು ಆರಂಭಿಸುತ್ತಾ ಪ್ರಾಪಂಚಿಕವಾದ ಸುಖ ಭೋಗಗಳಲ್ಲಿ ಮೈಮರೆಯುತ್ತೀರಿ ವಾಸ್ತವಕ್ಕೆ ಬಂದು ಕರ್ತವ್ಯದಲ್ಲಿ ನಿರತರಾಗಿ.

ಕಟಕ: ತುಂಬಾ ಭಾವುಕರಾಗಿ ಕತೆ ಕವನಗಳಲ್ಲಿ ಮಗ್ನರಾಗಿರುತ್ತೀರಿ. ಗುರು ಚಂದ್ರರ ಮನೋಬುದ್ಧಿ ಗ್ರಹಗಳ ಸಮಾಗಮದಿಂದ ಪಡಿತರು ನೀವಾಗುತ್ತೀರಿ.

ಸಿಂಹ: ನಿಮಗೆ ಸರಿಸಾಟಿ ಯಾರೂ ಇಲ್ಲವೆಂದು ಭಾವಿಸಿ ಸಾಮಾಜಿಕವಾದ ಗುರುತರ ಜವಾಬ್ದಾರಿಗಳನ್ನು ಹೊತ್ತು ಮರುಗುವುದರ ಬದಲು ಕೈಲಾದಷ್ಟು ಕೆಲಸ ಮಾಡಿ ತೃಪ್ತಿ ಪಡಿ.

ಕನ್ಯಾ: ಅಗತ್ಯಕಿಂತ ಹೆಚ್ಚಾದ ಆದಾಯ ಬರಲಿದೆ. ಅನುಕೂಲಕ್ಕೆ ತಕ್ಕ ಹಾಗೆ ಬಳಸಿ ಸದುಪಯೋಗಪಡಿಸಿ ಪಾಪಗ್ರಹಗಳ ಕಾಟದಿಂದ ವಿಮೋಚನೆ ಸದ್ಯದಲ್ಲಿಯೇ ಆಗಲಿದೆ.

ತುಲಾ: ನಿಮ್ಮ ಔದಾರ್ಯತೆ ಹಿರಿಮೆ ಗರಿಮೆಗಳಿಂದ ಜನಪ್ರಿಯ ವ್ಯಕ್ತಿಗಳಾಗಿ ಗೌರವ ಪಡೆಯಲಿದ್ದೀರಿ. ಸಮಾಜದ ಕಣ್ಣಿನಲ್ಲಿ ನೀವು ಸಂತರಂತೆ ತತ್ತ್ವೋಪದೇಶದ ಗುರುವಾಗಿರುತ್ತೀರಿ.

ವೃಶ್ಚಿಕ: ಅಭಿವೃದ್ಧಿಯ ಪಥದಲ್ಲಿ ಅಡಿಯಿಟ್ಟು ನಡೆಯುತ್ತಾ ಮೈ ಎಲ್ಲಾ ಕಣ್ಣಾಗಿ ಕೆಲಸ ಮಾಡಬೇಕಾಗಿದೆ ದುಷ್ಟರ ಕೂಟದಿಂದ ದೂರ ಸರಿದು ಕಾರ್ಯ ನಡೆಸುವುದು ಅನಿವಾರ್ಯ.

ಧನುಸ್ಸು: ಮಾತಿಗೆ ಮಾತು ನೀಡಿ ಕಲಹಗಳಿಗೆ ಆಸ್ಪದ ನೀಡಬೇಡಿ ಮೌನ ಬಂಗಾರ ಮಾತು ಬೆಳ್ಳಿ ಎನ್ನುವಂತೆ ಜಾಗ್ರತರಾಗಿರಿ.

ಮಕರ: ಅನ್ನ ದೇವರ ಮುಂದೆ ಇನ್ನು ದೇವರು ಉಂಟೇ? ನಿಮಗೆ ಗುರುವಿನ ಅನುಗ್ರಹವಿದೆ.

ಕುಂಭ: ಬಿರುಸಿನ ಮಾತುಗಳಿಂದ ಭಿನ್ನಾಭಿಪ್ರಾಯ ಒಡಕು ಮೂಡುತ್ತದೆ. ಗ್ರಹಗತಿಗಳ ಸ್ಥಿತಿಗತಿಯಲ್ಲಿ ಪ್ರಗತಿ ಕಾಣಲು ಅವಕಾಶವಿಲ್ಲ.

ಮೀನ: ನಿಮ್ಮ ಮಾತಿಗೆ ಮನ್ನಣೆಯಿದೆ ಜನಾನುರಾಗವೂ ಬಂಧುಮಿತ್ರರ ಸಹಕಾರವೂ ದೊರೆಯುತ್ತದೆ.

ರಮೇಶನ್ ಕಶ್ಯಪ
ಮೊ. ನಂ. 9740662363